### ಕರ್ನಾಟಕ ಲೋಕ ಸೇವಾ ಆಯೋಗ

ಸಂಖ್ಯೆ: ಪಿಎಸ್‌ಸಿ 1 ಆರ್‌ಟಿಬಿ-1/2021

ಲೋಕ ಸೇವಾ ಆಯೋಗದ ಕಛೇರಿ,
ಉದ್ಯೋಗ ಸೌಧ,
ಬೆಂಗಳೂರು, ದಿನಾಂಕ: 01-09-2022

### ಸೇರ್ಪಡೆ ಅಧಿಸೂಚನೆ

ಆಯೋಗದ ಅಧಿಸೂಚನೆ ಸಂಖ್ಯೆ ಪಿಎಸ್‌ಸಿ 1 ಆರ್‌ಟಿಬಿ-1/2021, ದಿನಾಂಕ 21-02-2022ರಲ್ಲಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆಯಲ್ಲಿ ಗ್ರೂಪ್ 'ಬಿ' ವೃಂದದಲ್ಲಿನ ಉಳಿಕೆ ಮೂಲ ವೃಂದದ ಸಹಾಯಕ ಅಭಿಯಂತರರು (ಗ್ರೇಡ್-1) 129 ಹುದ್ದೆಗಳು ಮತ್ತು ಹೈ.ಕ ವೃಂದದ 59 ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡುವ ಸಂಬಂಧ ಅಧಿಸೂಚನೆ ಹೊರಡಿಸಲಾಗಿತ್ತು. ಪ್ರಸ್ತುತ ಇಲಾಖೆಯವರು ಸದರಿ ಹುದ್ದೆಗಳಿಗೆ ಉಳಿಕೆ ಮೂಲ ವೃಂದದಲ್ಲಿ ಮತ್ತೆ 100 ಹುದ್ದೆಗಳನ್ನು ಭರ್ತಿ ಮಾಡಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ. ಆಯೋಗವು ದಿನಾಂಕ:21-02-2022ರಂದು ಅಧಿಸೂಚಿಸಿರುವ ಹುದ್ದೆಗಳಿಗೆ ಇದುವರೆವಿಗೂ ಸ್ಪರ್ಧಾತ್ಮಕ ಪರೀಕ್ಷೆಯನ್ನು ನಡೆಸಿರುವುದಿಲ್ಲ. ಆದ್ದರಿಂದ ಪ್ರಸ್ತುತ ಸ್ವೀಕೃತವಾಗಿರುವ 100 ಹುದ್ದೆಗಳ ಪ್ರಸ್ತಾವನೆಯನ್ನು ಈ ಹಿಂದಿನ ದಿನಾಂಕ:21-02-2022ರ ಅಧಿಸೂಚನೆಯಲ್ಲಿನ ಕಂಡಿಕೆ 8(3)ರಲ್ಲಿನ ಉಳಿಕೆ ಮೂಲ ವೃಂದದ 129 ಹುದ್ದೆಗಳೊಂದಿಗೆ ಸೇರ್ಪಡೆ ಮಾಡಲು ಆಯೋಗವು ನಿರ್ಣಯಿಸಿರುತ್ತದೆ. ಈ ಹಿನ್ನೆಲೆಯಲ್ಲಿ ಒಟ್ಟು ಹುದ್ದೆಗಳ ಪರಿಷ್ಕೃತ ವರ್ಗೀಕರಣವನ್ನು ಕೆಳಕಂಡಂತೆ ಪ್ರಕಟಿಸಲಾಗಿದೆ:-

**ಉಳಿಕೆ ಮೂಲ ವೃಂದ – 229 ಹುದ್ದೆಗಳು**

| ಮೀಸಲಾತಿ | ಇ | ಮ | ಗ್ರಾ | ಮಾ.ಸೈ. | ಕಮಾಅ | ಅಂ.ವಿ. | ತೃ.ಲಿ | ಒಟ್ಟು |
|---|---|---|---|---|---|---|---|---|
| ಪ.ಜಾ | 6 | 12 | 9 | 3 | 2 | 1*<br>1** | 1 | 35 |
| ಪ.ಪಂ. | 2 | 2 | 2 | - | - | 1* | - | 07 |
| ಪ್ರ.1 | 2 | 3 | 3 | - | - | 1* | - | 09 |
| ಪ್ರ.2ಎ | 6 | 12 | 9 | 3 | 2 | 1*<br>1** | 1 | 35 |
| ಪ್ರ.2ಬಿ | 2 | 3 | 3 | - | - | 1* | - | 09 |
| ಪ್ರ.3ಎ | 2 | 3 | 3 | - | - | 1* | - | 09 |
| ಪ್ರ.3ಬಿ | 2 | 4 | 3 | 1 | - | 1* | - | 11 |
| ಸಾ.ಅ. | 24 | 38 | 29 | 11 | 6 | 2*<br>1**<br>1***<br>1**** | 1 | 114 |
| ಒಟ್ಟು | 46 | 77 | 61 | 18 | 10 | 14 | 3 | 229 |

ಅಧಿಸೂಚನೆ ಸಂಖ್ಯೆ WCD 118 PHP 2020 ದಿ: 13-01-2022 ರ ಪ್ರಕಾರ
(a)* Low Vision (b)** Locomotor Disability - OA, OL, DW, AAV, CP, LC
(c)*** D, HH (d) **** SLD, MI, MD involving (a) to (d) above

ಮುಂದುವರೆದು, ದಿನಾಂಕ:21-02-2022ರ ಅಧಿಸೂಚನೆಯಲ್ಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸುವ ಕೊನೆಯ ದಿನಾಂಕ:18-04-2022ಕ್ಕೆ ಮುಕ್ತಾಯವಾಗಿರುತ್ತದೆ. ಪ್ರಸ್ತುತ 100 ಹುದ್ದೆಗಳನ್ನು ಸೇರ್ಪಡೆ ಮಾಡಿರುವ ಹಿನ್ನೆಲೆಯಲ್ಲಿ ದಿನಾಂಕ:21-02-2022ರ ಅಧಿಸೂಚನೆಯಲ್ಲಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸದೇ ಇರುವ ಅಭ್ಯರ್ಥಿಗಳು ಮಾತ್ರ ಅರ್ಜಿ ಸಲ್ಲಿಸಲು ಹೆಚ್ಚಿನ ಕಾಲಾವಕಾಶ ನೀಡುವ ಸಲುವಾಗಿ ಕೆಳಕಂಡಂತೆ ಅರ್ಜಿ ಸಲ್ಲಿಸುವ ದಿನಾಂಕ ಮತ್ತು ಕೊನೆಯ ದಿನಾಂಕಗಳನ್ನು ವಿಸ್ತರಿಸಲಾಗಿದೆ.

- ಅರ್ಜಿ ಸಲ್ಲಿಸಲು ಪ್ರಾರಂಭಿಕ ದಿನಾಂಕ: 02-09-2022
- ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 30-09-2022
- ಶುಲ್ಕ ಪಾವತಿಸಲು ಕೊನೆಯ ದಿನಾಂಕ: 01-10-2022

ದಿನಾಂಕ:21-02-2022ರ ಅಧಿಸೂಚನೆಗೆ ಅರ್ಜಿ ಸಲ್ಲಿಸದೇ ಇರುವ ಅಭ್ಯರ್ಥಿಗಳು ಮಾತ್ರ ಮೇಲ್ಕಂಡ ದಿನಾಂಕಗಳಲ್ಲಿ ಅರ್ಜಿ ಸಲ್ಲಿಸತಕ್ಕದ್ದು. ಈಗಾಗಲೇ ಅರ್ಜಿ ಸಲ್ಲಿಸಿರುವ ಅಭ್ಯರ್ಥಿಗಳು ಮತ್ತೊಮ್ಮೆ ಅರ್ಜಿ ಸಲ್ಲಿಸುವಂತಿಲ್ಲ. ಉಳಿದಂತೆ ಸದರಿ ಹುದ್ದೆಗಳಿಗೆ ನಿಗದಿಪಡಿಸಿರುವ ವಿದ್ಯಾರ್ಹತೆ, ವಯೋಮಿತಿ, ಇತ್ಯಾದಿ ವಿವರಗಳಿಗೆ ಸಂಬಂಧಿಸಿದಂತೆ ದಿನಾಂಕ:21-02-2022/ 25-03-2022/ 24-08-2022ರ ಅಧಿಸೂಚನೆ/ ತಿದ್ದುಪಡಿ ಅಧಿಸೂಚನೆಯಲ್ಲಿನ ಷರತ್ತುಗಳು ಯಥಾವತ್ತಾಗಿ ಮುಂದುವರೆಯುತ್ತವೆ.

(ಸುರಳ್ಕರ್ ವಿಕಾಸ್ ಕಿಶೋರ್)
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.